ಒಬ್ಬ ಮಾನ್ಯ ಸದಸ್ಯರು :– ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಿದೆ.

ಅಧ್ಯಕ್ಷರು :– ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾಗಿರುವ ವಿಷಯಗಳನ್ನು ಈಗ ತೆಗೆದುಕೊಳ್ಳುವುದಿಲ್ಲ. ಅದನ್ನು afternoon ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :– ಮಧ್ಯಾಹ್ನದ ಮೇಲೆ ತೆಗೆದುಕೊಂಡಾಗ ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಖಂಡಿತ, ತುಂಬಾ ಜನರು ಇದ್ದಾರೆ. ಎಲ್ಲರಿಗೂ ಸ್ವಲ್ಪ ಸ್ವಲ್ಪ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ :– ಮಾನ್ಯ ಅಧ್ಯಕ್ಷರೆ, ಗೆದ್ದಿದ್ದಾರೆ, ಆಡಳಿತ ಪಕ್ಷದವರಾದ ಅವರು ಸಂಭ್ರಮ, ಉತ್ಸಾಹಗಳಿಂದ ಬಂದು ಅವರು ಮುಂಚೆ ಕುಳಿತುಕೊಳ್ಳಬೇಕು. ಆದರೆ ಏಕೋ ಏನೋ ಆ ಉತ್ಸಾಹವೇ ಅವರಲ್ಲಿ ಕಾಣುತ್ತಿಲ್ಲ.

1, ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅನುಮತಿ ಕೋರಿಕೆ.

ಅಧ್ಯಕ್ಷರು :– ಈಗ ಆ ವಿಚಾರ ಬೇಡ. ಮಾನ್ಯ ರೇವಣ್ಣನವರೆ, ನೀವು ಮಾತನಾಡಿ.

ವಿಷಯ :– ಆಲೂಗೆಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ಬೆಳೆ ಸಂಪೂರ್ಣ ನಾಶವಾಗಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ನಮ್ಮ ಹಾಸನ ಜಿಲ್ಲೆಯೊಳಗೆ ಮೇಜರ್ ಕ್ರಾಪ್ ಎಂದರೆ ಆಲೂಗಡ್ಡೆ ಬೆಳೆಯಾಗಿದೆ. ಕಳೆದ ನಾಲ್ಕು ವರ್ಷದಿಂದ ಆಲೂಗಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ಬೆಳೆ ಸಂಪೂರ್ಣ ಹಾಳಾಗಿದೆ. 31825 ಟನ್ ಆಲೂಗಡ್ಡೆ ಭಿತ್ತನೆ ಬೀಜವೆಂದು ಎ.ಪಿ.ಎಂ.ಸಿ.ಯವರು ತಂದಿರುವುದರಲ್ಲಿ ವರ್ತಕರು ಮತ್ತು ಎ.ಪಿ.ಎಂ.ಸಿ.ಯವರಲ್ಲಿ ಕೆಲವರು ಸೇರಿಕೊಂಡು ಶಾಮೀಲಾಗಿ certified seeds ಎಂದು ತಂದಿದ್ದಾರೆ. ಆದರೆ ಅದು certified seeds ಅಲ್ಲ. ನಾನು ತಮಗೆ ಕಳುಹಿಸಿಕೊಡುತ್ತೇನೆ. ದಿನಾಂಕ 13–05–2013 ರಿಂದ ಇದನ್ನು ಮಾರಾಟ ಮಾಡುತ್ತಿದ್ದಾರೆ.

ಅಧ್ಯಕ್ಷರು :– ರೇವಣ್ಣನವರೆ, ಸಂಕ್ಷಿಪ್ತವಾಗಿ ಹೇಳಿ. ಆಮೇಲೆ ಇದರ ಬಗ್ಗೆ ವಿವರವಾಗಿ ಹೇಳುವಿರಂತೆ. ಇದನ್ನು ರೂಲ್ 69 ರಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮೇ 13ನೇ ದಿನಾಂಕದಿಂದ ಇದುವರೆಗೆ 30 ಸಾವಿರ ಟನ್ ಆಲೂಗೆಡ್ಡೆ ಬಿತ್ತನೆ ಬೀಜವೆಂದು ಹೇಳಿ ಮಾರಾಟ ಮಾಡಿದ್ದಾರೆ. ಆದರೆ ಅದು certified seeds ಅಲ್ಲ. ಅದರಲ್ಲಿ ಏನಾದರೂ ಒಂದು ಮೂಟೆ certified seeds ಆಗಿದ್ದರೆ ನೀವು ಹೇಳುವುದಕ್ಕೆ ನಾನು ಭಾಗಿಯಾಗುತ್ತೇನೆ. ಈಗ ಮೇ 15 ರಿಂದ ಜೂನ್ 15 ರೊಳಗೆ ಬಿತ್ತನೆ ಕಾರ್ಯವನ್ನು ಮಾಡಬೇಕು. ಈಗಾಗಲೇ ಪ್ರಾರಂಭವಾಗಿ ಕೆಲವು ಕಡೆ ಆಲೂಗೆಡ್ಡೆ ಬಿತ್ತನೆ ಬೀಜವನ್ನೇನು ತರಲಾಗಿತ್ತೋ ಅದೆಲ್ಲವೂ ಹಾಳಾಗಿದೆ. ವರ್ತಕರು, ಎ.ಪಿ.ಎಂ.ಸಿ.ಯವರು, ಅಧಿಕಾರಿಗಳು ಶಾಮೀಲಾಗಿದ್ದಾರೆ. ಕಳೆದ ಸಾರಿ ಸುಮಾರು 300 ರಿಂದ 400 ಕೋಟಿ ರೂ.ಗಳ ಬೆಳೆ ನಾಶವಾಗಿದೆ. ಇವತ್ತು ಮತ್ತೆ ಅದೇ ರೀತಿಯಾಗಿದೆ. ತೋಟಗಾರಿಕಾ ಇಲಾಖೆಯವರಿಗೆ ಹಲವಾರು ಬಾರಿ ನಾವು ತಿಳಿಸಿದ್ದೇವೆ. ಆಲೂಗೆಡ್ಡೆ ಬೆಳೆ ನಾಶಕ್ಕೆ ಪರಿಹಾರವನ್ನು ಕೊಡಬೇಕೆಂದು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ನಾವು ಕೇಳಿದೆವು. ಆಗಲಿಲ್ಲ. ಮುಖ್ಯಮಂತ್ರಿಗಳ ಹತ್ತಿರ ಹೋಗಿದ್ದೆವು. ಆದಕಾರಣ ಇದರ ಬಗ್ಗೆ ತುರ್ತಾಗಿ ಚರ್ಚೆಯಾಗಬೇಕಿದೆ.

ಅಧ್ಯಕ್ಷರು :– ನಾಳೆಯೇ ನಿಯಮ 69 ರಡಿಯಲ್ಲಿ ತೆಗೆದುಕೊಳ್ಳೋಣ. ಈಗ ರಾಜ್ಯಪಾಲರ ಭಾಷಣದ ಮೇಲೆ ಶ್ರೀಮಾನ್ ಕಾರಜೋಳರವರು ಮಾತನಾಡಬೇಕು. ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರು ಹೆಚ್ಚು ಸಮಯ ತೆಗೆದುಕೊಳ್ಳದೆ ಹತ್ತು ನಿಮಿಷದಲ್ಲಿ ಮಾತನಾಡಿ ಮುಕ್ತಾಯ ಮಾಡಬೇಕು.

2. **ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇರೆ ಮುಂದುವರಿದ ಚರ್ಚೆ.**

ಶ್ರೀ ಗೋವಿಂದ ಎಂ. ಕಾರಜೋಳ :– ನನಗೆ ಇಪ್ಪತ್ತು ನಿಮಿಷ ಕೊಡಿ ಅಧ್ಯಕ್ಷರೆ.